ದಿನಾಂಕ 20.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ಶ್ರೀಮತಿ ಸಿ.ಡಿ.ಬಿ ವಕೀಲರಿಂದ 3 ನೇ ಎದುರುದಾರರ ಪರವಾಗಿ

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಅಪಘಾತ ದಿನ ಕಿಕ್ಕೇರಿ ಗ್ರಾಮದಿಂದ ವಡ್ಡರಹಳ್ಳಿ ಗ್ರಾಮಕ್ಕೆ ನಾನು ಬೈಕ್ ನಂ. ಕೆ.ಎ.13.ಇ.ಎಂ.5808 ರಲ್ಲಿ ಬರುತ್ತಿದ್ದೆ. ಸದರಿ ಬೈಕ್ ನನ್ನ ಚಿಕ್ಕಮ್ಮನಿಗೆ ಸೇರಿರುತ್ತದೆ. ನನಗೆ ವಾಹನ ಚಾಲನಾ ಪರವಾನಿಗೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಾನು ಚಲಾಯಿಸುತ್ತಿದ್ದ ವಾಹನಕ್ಕೆ ವಿಮಾ ಪಾಲಿಸಿ ಇತ್ತು.

2. ನಾನು ಆಧಾರ್ ಕಾರ್ಡ, ರೇಷನ್ ಕಾರ್ಡಗಳನ್ನು ಪಡೆದುಕೊಂಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತ ಆಗುವ ಸಮಯದಲ್ಲಿ ನನಗೆ 29 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನಮ್ಮ ಕುಟುಂಬ ಪಡಿತರ ಚೀಟಿಯು ಬಿ.ಪಿ.ಎಲ್ ವರ್ಗಕ್ಕೆ ಸೇರಿರುತ್ತದೆ. ನನಗೆ ಹಿಂಬದಿಯಿಂದ ಬಂದು ವಾಹನವು ಡಿಕ್ಕಿ ಪಡಿಸಿರುತ್ತದೆ. ನನಗೆ ಅಪಘಾತದಲ್ಲಿ ತಲೆಗೆ ಪೆಟ್ಟಾಗಿ ಪ್ರಜ್ಞೆ ಇರಲಿಲ್ಲ. ಆಗ ನನ್ನನ್ನು ನನ್ನ ಭಾವ ಶಂಕರ್ ರವರು ಆಸ್ಪತ್ರಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಹೇಗೆ ಆಯಿತು ಎಂದು ಶಂಕರ್ ರವರು ತಿಳಿಸಿರುತ್ತಾರೆ. ನನಗೆ ಪ್ರಜ್ಞೆಯು ಸುಮಾರು 1 ತಿಂಗಳು ಆದ ನಂತರ ಬಂದಿರುತ್ತದೆ.

3. ಚನ್ನರಾಯಪಟ್ಟಣದ ಆಸ್ಪತ್ರೆಯಿಂದ ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಜನಪ್ರಿಯಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನನಗೆ ಬೋಲೆರೋ

ವಾಹನ ಸಂಖ್ಯೆ ಕೆ.ಎ.13.ಸಿ 5445 ವಾಹನದಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಸತೀಶ ಎಂಬುವವರು ನನ್ನ ಪರಿಚಯಸ್ಥರು ಎಂದರೆ ಸರಿ. ನನಗೆ ಶಸ್ತ್ರ ಚಿಕಿತ್ಸೆ ಮಾಡಿದ್ದು ಮತ್ತೆ ಬರುವಂತೆ ತಿಳಿಸಿರುತ್ತಾರೆ. ನಾನು ಸುಮಾರು 1 ತಿಂಗಳಿಗಿಂತಲೂ ಹೆಚ್ಚು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿಲ್ಲ. ನನಗೆ ತಲೆಗೆ ಪೆಟ್ಟಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

4. ನಾನು ಅಪಘಾತ ಆಗುವುದಕ್ಕಿಂತ ಮುಂಚೆ ಹೋಟೆಲ್ ಮತ್ತು ವ್ಯವಸಾಯದ ಕೆಲಸ ಮಾಡುತ್ತಿದ್ದೆ. ಈಗ ಕೆಲಸ ಮಾಡಲು ನನಗೆ ಆಗುತ್ತಿಲ್ಲ. ನನಗೆ ಜಮೀನು ಇಲ್ಲ, ನನ್ನ ಮಾವನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಯಾವುದೇ ಅಪಘಾತ ಆಗಿಲ್ಲ, ನಾನು ಎಲ್ಲೋ ಸ್ವತಃ ಬಿದ್ದು ಗಾಯಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ತಿಂಗಳಿಗೊಮ್ಮೆ ಚಿಕಿತ್ಸೆ ಪಡೆದುಕೊಳ್ಳುತ್ತೇನೆ.

5. ಅಪಘಾತ ಸಂಬಂಧವಾಗಿ ದೂರನ್ನು ನನ್ನ ಮಾವ ಶಂಕರರವರು ನೀಡಿರುತ್ತಾರೆ. ದೂರನ್ನು ದಿನಾಂಕ 18.10.2021 ರಂದು ನೀಡಲಾಗಿರುತ್ತದೆ. ನನಗೆ ಯಾವುದೇ ಅಪಘಾತ ಆಗಿರಲಿಲ್ಲ, ಆ ಕಾರಣದಿಂದ 22 ದಿನಗಳ ಕಾಲ ತಡವಾಗಿ ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಕುಟುಂಬವನ್ನು ನೋಡಿಕೊಳ್ಳುತ್ತಿದ್ದೆ

ಎಂದು ಸುಳ್ಳು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯು ಚಾಲನಾ ಪರವಾನಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈ ಹಿಂದಿನಿಂದಲೂ ಮಾತನಾಡಲು ತೊಂದರೆ ಇದ್ದು, ಅಪಘಾತದಲ್ಲಿ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಪೊಲೀಸರು, 1 ನೇ ಎದುರುದಾರರು ಪರಸ್ಪರ ಶಾಮೀಲಾಗಿ ಪರಿಹಾರ ಪಡೆಯಲು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣದಿಂದ 3 ನೇ ಎದುರುದಾರರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ತೆ ನ್ಯಾ ನ ಉ ಮೇ ಬೆ ಮಾಡಿಸಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.